ರೂಢಿಯಲ್ಲಿರುವುದು. ನ್ಯಾಯ, ನೈತಿಕತೆಗಳಿಲ್ಲದೆ ರಾಜ್ಯ ಹೇಗಿದ್ದೀತು?" ಧರ್ಮಕ್ಕೆ ರಿಲಿಜನ್ ಅಥವಾ ಮತ ಎಂಬ ನ್ಯೂನಾರ್ಥ ನೀಡಿದುದು ಸಾಮಾಜಿಕ ಅಸಾಮರಸ್ಯಕ್ಕೆ ಕಾರಣವಾಗಿದೆ.

ಎಲ್ಲರಿಗೂ ಎಲ್ಲ ಕ್ಷೇತ್ರಗಳಲ್ಲಿಯೂ ಅನ್ವಯಿಸುವ ಸದಾಚಾರ ನಿಯಮಗಳು ಅನಾದಿಕಾಲದಿಂದ 'ಧರ್ಮ' ಎನಿಸಿವೆ. 'ರಿಲಿಜನ್' ಎಂದರೆ ವಿವಿಧ ಪೂಜಾವಿಧಾನಗಳು ಇತ್ಯಾದಿ. ಇವು ಹಲವಾರು ಮತೀಯ ಅತಿರೇಕಗಳು ಹಾಗೂ ಸಂಘರ್ಷಗಳಿಗೆ ಕಾರಣವಾದ ಸಂದರ್ಭಗಳಿವೆ. ಆದರೆ ಧರ್ಮ ಎಲ್ಲರನ್ನೂ ಒಗ್ಗೂಡಿಸುತ್ತದೆ. ಇದು ಸಾರ್ವತ್ರಿಕವಾದದ್ದು. 'ಹಿಂದೂ' ಎಂಬ ಮಾತು ಬಳಕೆಗೆ ಬಂದ ಮೇಲೆ ಅಂಥ ಸಾರ್ವತ್ರಿಕ ಆಚಾರಸಂಹಿತೆಯೇ 'ಹಿಂದೂಧರ್ಮ' ಎಂಬ ಹೆಸರನ್ನು ಪಡೆಯಿತು.

### ರಾಜಾಧಿಕಾರ

ಧರ್ಮದ ಕಟ್ಟಳೆಗಳು ಪ್ರಜೆಗಳು ಮತ್ತು ಪ್ರಭುಗಳು ಇಬ್ಬರಿಗೂ ಸಮಾನವಾಗಿ ಅನ್ವಯಿಸುತ್ತವೆ ಎಂದು ಮೇಲೆ ಹೇಳಿದೆವಷ್ಟೆ. ರಾಜಾಧಿಕಾರದ ವಿನಿಯೋಗ ಹೇಗಿರಬೇಕೆಂಬುದನ್ನು ಚಿತ್ರಕೂಟದಲ್ಲಿ ಶ್ರೀರಾಮನು ಭರತನಿಗೆ ರಾಜ್ಯಾಧಿಕಾರ ವಹಿಸಿಕೊಳ್ಳುವಂತೆ ಆದೇಶ ನೀಡುವ ಸಂದರ್ಭದಲ್ಲಿ ಸ್ಫುಟಗೊಳಿಸಲಾಗಿದೆ. ಆ ಉಪದೇಶವನ್ನು 'ಸೀತಾಯನ' ಎಂಬ ಕೃತಿಯಲ್ಲಿ ಡಾ. ಕೆ.ಆರ್. ಶ್ರೀನಿವಾಸ ಅಯ್ಯಂಗಾರ್ಯರು ಹೀಗೆ ಸಂಗ್ರಹಿಸಿದ್ದಾರೆ:



ಭರತನಿಗೆ ಶ್ರೀರಾಮನ ಉಪದೇಶ

**"ಎಲೈ ಭರತನೆ, ಧರ್ಮದ ಕಟ್ಟಳೆಗಳು ನಿಸರ್ಗದ ನಿಯಮಗಳಂತೆ. ಅವನ್ನು ಯಾರೂ ಸ್ವೇಚ್ಛೆಯಾಗಿ ವ್ಯತ್ಯಯ ಮಾಡಲಾಗದು. ಹೀಗೆ ಮಾಡುವುದು ಸಾಧು, ಹೀಗೆಯೇ ನೀನು ನಡೆಯತಕ್ಕದ್ದು ಎಂದು ಧರ್ಮವು ವಿಧಿಸಿದಾಗ ಅದರಿಂದ ನುಣುಚಿಕೊಳ್ಳಲು ಯತ್ನಿಸುವುದು ತಪ್ಪು."**

**"ಭರತ, ಅಧಿಕಾರವು ವಿಷದಂತೆ. ಅಧಿಕಾರವನ್ನು ಪ್ರಯೋಗಿಸುವುದಕ್ಕೆ ಮತ್ತು ಅದರ ವಿಷಪ್ರಭಾವದಿಂದ ಮುಕ್ತರಾಗಿ ಉಳಿಯುವುದಕ್ಕೆ ದೈವಕೃಪೆ ಬೇಕು. ನಾವು ಧರ್ಮಕ್ಕೆ ಅನುವರ್ತಿಗಳಾಗಿದ್ದರೆ ದೈವಕೃಪೆ ನಿಶ್ಚಿತವಾಗಿ ನಮಗೆ ದೊರೆಯುತ್ತದೆ. ಆದರೆ ಅಧಿಕಾರವನ್ನಷ್ಟೇ ಅವಲಂಬಿಸಿದವರು ಅದರ ವಿಷಪ್ರಭಾವದಿಂದ ಹತರಾಗುತ್ತಾರೆ."**

ರಾಮನು ನೀಡಿದ ಈ ಹಿತವಚನವು ಎಲ್ಲ ಕಾಲಕ್ಕೂ ಸಂಗತವಾಗಿದೆ. ಯಾವುದೇ ರಾಜ್ಯವಿನ್ಯಾಸದಲ್ಲಿ ಅಧಿಕಾರ ಬಳಸುವವರು ಕೂಡ ಅದನ್ನು ಮನ್ನಿಸಬೇಕಾಗುತ್ತದೆ. ಎಲೆಕ್ಟ್ರಿಕ್ ಸಾಧನಗಳನ್ನು ರಿಪೇರಿ ಮಾಡುವವರು ರಕ್ಷಣೆಗಾಗಿ ರಬ್ಬರಿನ ಕೈಕವಚವನ್ನು ಧರಿಸುವಂತೆ ರಾಜ್ಯಾಧಿಕಾರವನ್ನು ಚಲಾಯಿಸುವವರು ಧರ್ಮದ ಕವಚವನ್ನು ಧರಿಸಿರಬೇಕು. ಧರ್ಮವನ್ನು ಉಪೇಕ್ಷೆ ಮಾಡುವುದು ವಿನಾಶಕಾರಿ.

(ಮುಂದುವರಿಯುವುದು)

## ಸುವರ್ಣಸೂತ್ರಗಳು

ಒಬ್ಬ ಮುದುಕ ಸಾಯುವ ಸ್ಥಿತಿಯಲ್ಲಿದ್ದ. ಅವನ ಮಗನಿಗೆ ಹೀಗೆ ಹೇಳಿದ: "ಮಗೂ, ನನ್ನ ಹತ್ತಿರ ನಿನಗೆ ಕೊಡಲು ನಾಲ್ಕು ಬಾಳುವೆಯ ನಿಯಮಗಳನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಅವು ನನ್ನ ಜೀವನದಲ್ಲಿ ಬಹಳ ಸಹಾಯ ಮಾಡಿದವು. ನಿನ್ನ ಜೀವನಕ್ಕೂ ಅವು ಸಹಾಯಕವಾಗಬಲ್ಲವು: ೧. ಬೇರೆಯವರು ಏನು ಮಾತನಾಡುತ್ತಾರೆ ಎಂಬುದರ ಬಗ್ಗೆ ಹೆದರದಿರು. ೨. ನೀನು ಹೆಚ್ಚು ಹೆಚ್ಚು ಪ್ರಾಪಂಚಿಕ ವಸ್ತುಗಳನ್ನು ಸಂಪಾದಿಸಿದ ಹಾಗೆಲ್ಲ, ಹೆಚ್ಚು ಹೆಚ್ಚು ಲೋಭಿಯಾಗುವೆ. ಅವುಗಳಿಂದ ಮುಕ್ತನಾಗಿದ್ದುಕೊಂಡು, ನಿನಗೆ ಏನು ಪ್ರಾಪ್ತವಾಗುವುದೋ ಅದರಲ್ಲಿ ಸಂತೋಷದಿಂದಿರು. ೩. ಗಂಭೀರವಾದ ಸಂಗತಿಗಳನ್ನು ಹಗುರವಾಗಿ ತೆಗೆದುಕೋ; ಹಗುರವಾದ ಸಂಗತಿಗಳನ್ನು ಗಂಭೀರವಾಗಿ ತೆಗೆದುಕೋ. ೪. ಯಾವಾಗಲೂ ನಿನ್ನ ಮೇಲೆ ತಮಾಷೆ ಮಾಡಿಕೊಂಡು ನಗುತ್ತಿರು. ನಿನ್ನ ಲೋಪದೋಷಗಳನ್ನು ಒಪ್ಪಿಕೊಳ್ಳಲು ಹಿಂಜರಿಯಬೇಡ. (ಆಧಾರ)

# ಸಾರ್ವಜನಿಕ ಭ್ರಷ್ಟಾಚಾರದ ವಿರುದ್ಧ ಸಮರ ಸಾಧ್ಯವೇ?

ಎಸ್. ವಿಠಲ್



ಸಂಸತ್ ಭವನ, ನವದೆಹಲಿ

(ಸಾರ್ವಜನಿಕ ವಲಯವು ಇಂದು ಭ್ರಷ್ಟಾಚಾರದ ಆಡುಂಬೊಲವಾಗಿದೆ. ಇದು ನಮ್ಮ ದೇಶದ ಭದ್ರತೆ ಮತ್ತು ಅಭಿವೃದ್ಧಿಗಳಿಗೆ ಅಪಾಯಕಾರಿಯಾಗಿ ಪರಿಣಮಿಸಿದೆ. ಇದರ ನಿಯಂತ್ರಣದ ಆವಶ್ಯಕತೆ ಮತ್ತು ಸಾಧ್ಯತೆಗಳ ಬಗ್ಗೆ ತಿಳಿಸಿಕೊಟ್ಟಿರುವ ಮಾನ್ಯ ಲೇಖಕರು ಭಾರತದ ಮುಖ್ಯ ಪರಿವೀಕ್ಷಣಾ ಅಧಿಕಾರಿಗಳಾಗಿದ್ದರು (**Chief Vigilance Officer**). ಅವರು ನವದೆಹಲಿಯಲ್ಲಿರುವ ನ್ಯಾಷನಲ್ ಡಿಫೆನ್ಸ್ ಕಾಲೇಜಿನ ವಿದ್ಯಾರ್ಥಿಗಳಿಗೆ ಮಾಡಿದ ಭಾಷಣವನ್ನು ಸಂಕ್ಷಿಪ್ತಗೊಳಿಸಿ ಕನ್ನಡಕ್ಕೆ ಅನುವಾದಿಸಿರುವ ಡಾ. ಎಚ್. ರಾಮಚಂದ್ರಸ್ವಾಮಿಯವರು ಇತ್ತೀಚಿಗೆ ದೈವಾಧೀನರಾದರು. ಇವರು 'ವಿವೇಕಪ್ರಭ'ದ ಪ್ರಥಮ ಸಂಚಿಕೆಯಿಂದಲೂ, ಈ ಪತ್ರಿಕೆಯ ನಿಯಮಿತ ಲೇಖಕರು ಹಾಗೂ ಅಭಿಮಾನಿಗಳಾಗಿದ್ದವರು. ಉತ್ತಮ ಚಿಂತಕರು ಮತ್ತು ಅನುವಾದಕರಾಗಿದ್ದ ಇವರು ಅನೇಕ ಪುಸ್ತಕಗಳನ್ನು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮಕ್ಕೆ ಸ್ವತಂತ್ರವಾಗಿ ಬರೆದುಕೊಟ್ಟಿದ್ದಾರೆ ಹಾಗೂ ಅನುವಾದ ಮಾಡಿಕೊಟ್ಟಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ವಿವೇಕಾನಂದ ಪೀಠದ ಸಂದರ್ಶಕ ಪ್ರಾಧ್ಯಾಪಕರಾಗಿದ್ದ ಶ್ರೀಯುತರು ವಿಜ್ಞಾನ ಸಾಹಿತ್ಯ ಕ್ಷೇತ್ರದಲ್ಲಿಯೂ ಗಣನೀಯ ಸೇವೆ ಸಲ್ಲಿಸಿದ್ದಾರೆ. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಆತ್ಮೀಯ ಭಕ್ತರಾಗಿದ್ದ ಇವರ ಮರಣ ತುಂಬಲಾಗದ ನಷ್ಟವನ್ನು ಉಂಟುಮಾಡಿದೆ. ಇವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ದಿವ್ಯತ್ರಯರನ್ನು 'ವಿವೇಕಪ್ರಭ' ವು ಈ ಮೂಲಕ ಪ್ರಾರ್ಥಿಸುತ್ತದೆ.)

ಭ್ರಷ್ಟಾಚಾರವೆಂದರೆ ಪ್ರಾಮಾಣಿಕತೆಯ ಕೊರತೆ. ಇದು ಆರ್ಥಿಕ, ನೈತಿಕ ಅಥವಾ ಬೌದ್ಧಿಕ ಪ್ರಾಮಾಣಿಕತೆಯ ಕೊರತೆಯಾಗಿರಬಹುದು. ವಿಶ್ವಬ್ಯಾಂಕ್ ಭ್ರಷ್ಟಾಚಾರದ ವಿಷಯದಲ್ಲಿ ವಿಶೇಷವಾಗಿ ಆರ್ಥಿಕ ಪ್ರಾಮಾಣಿಕತೆಯ ದೃಷ್ಟಿಯಿಂದ ಗಮನ ಹರಿಸಿದೆ. ಸಾರ್ವಜನಿಕ ಕಛೇರಿಯೊಂದನ್ನು ವೈಯಕ್ತಿಕ ಪ್ರಯೋಜನಕ್ಕಾಗಿ ಬಳಕೆ ಮಾಡಿಕೊಳ್ಳುವುದನ್ನು ವಿಶ್ವಬ್ಯಾಂಕ್ ಭ್ರಷ್ಟಾಚಾರವೆಂದು ಕರೆದಿದೆ. ಭ್ರಷ್ಟಾಚಾರವು ಬಡಜನತೆಗೆ ವಿರೋಧವಾಗಿರುವುದು ಮಾತ್ರವಲ್ಲ, ರಾಷ್ಟ್ರೀಯ ಭಾವನೆಗೆ ಹಾಗೂ ದೇಶದ ಆರ್ಥಿಕಾಭಿವೃದ್ಧಿಗೂ ಮಾರಕವಾಗಿರುವುದನ್ನು ಪ್ರಪಂಚದೆಲ್ಲೆಡೆಯ ಅನುಭವವು ತೋರಿಸಿಕೊಟ್ಟಿದೆ.

ಸರ್ಕಾರವೆಂಬ ಸಂಸ್ಥೆಯನ್ನು ನಡೆಸುವ ಜನರೂ ನಮ್ಮ ಸಮಾಜದಿಂದಲೇ ಬಂದವರಲ್ಲವೆ? ಸರ್ಕಾರದಲ್ಲಿನ ಭ್ರಷ್ಟಾಚಾರವು ಅದನ್ನು ನಡೆಸುವವರ ವೈಯಕ್ತಿಕ ನೈತಿಕಮೌಲ್ಯಗಳ ಮೇಲೆ, ಸಮಾಜವು ಒಪ್ಪಿಕೊಂಡು ಅನುಷ್ಠಾನದಲ್ಲಿಟ್ಟುಕೊಂಡಿರುವ ನೀತಿ ನಿಯಮಗಳ ಮೇಲೆ ಅವಲಂಬಿಸಿರುತ್ತದೆ. ವ್ಯಕ್ತಿಯ ನೈತಿಕಮೌಲ್ಯಗಳು ಅವನು ತಂದೆತಾಯಿಗಳಿಂದ, ಗುರುಗಳಿಂದ, ಸ್ನೇಹಿತರಿಂದ ಹೇಗೆ ಪ್ರಭಾವಿತನಾಗಿ ಬೆಳೆದಿರುವನು ಎಂಬುದರಿಂದ ನಿರ್ಧರಿಸಲ್ಪಡುತ್ತವೆ. ಇನ್ನು ಸಾಮಾಜಿಕ ಮೌಲ್ಯಗಳು ಹೇಗೆ ಬದಲಾಗಿವೆಯೆನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ನಮ್ಮ ನಾಯಕರು ಜನರಿಂದ ಬೇಕಾದಷ್ಟು ಹಣ ಸಂಗ್ರಹಿಸುತ್ತಿದ್ದರು; ಆದರೆ ಯಾರೊಬ್ಬರ ಬಗ್ಗೆಯೂ ಭ್ರಷ್ಟಾಚಾರದ ಆರೋಪ ಕೇಳಿಬಂದಿರಲಿಲ್ಲ. ಆದರೆ ಸ್ವಾತಂತ್ರ್ಯ ಬಂದ ಮೇಲೆ, ಸಮಾಜದ ಎಲ್ಲ ವರ್ಗಗಳಲ್ಲೂ, ಮುಂದಾಳುಗಳೆನಿಸಿಕೊಂಡವರು ಏಕಪ್ರಕಾರವಾಗಿ ನೈತಿಕಮೌಲ್ಯಗಳನ್ನು ಕಳೆದುಕೊಂಡು ಬಹು ಬೇಗ ಭ್ರಷ್ಟಾಚಾರಿಗಳಾಗುತ್ತಿದ್ದಾರೆ; ಅದರಲ್ಲೂ ಸಾರ್ವಜನಿಕ ಸೇವೆಯಲ್ಲಿರುವ ಅಧಿಕಾರಿಗಳು ಹಾಗೂ ರಾಜಕೀಯ ಧುರೀಣರಲ್ಲಿ ಭ್ರಷ್ಟರಲ್ಲದೆ ಇರುವವರು ಅಪವಾದವೆನ್ನುವಷ್ಟರಮಟ್ಟಿಗೆ ಅಪರೂಪವಾಗಿಬಿಟ್ಟಿದ್ದಾರೆ.

ಇಂದು ಸಾಮಾಜಿಕ ಮೌಲ್ಯಗಳು ಎಷ್ಟು ಪತನಗೊಂಡಿವೆ ಎಂದರೆ ಭಾರತೀಯ ಪ್ರಜಾಪ್ರಭುತ್ವ ಎನ್ನುವುದೊಂದು ಆರ್ಥಿಕಶಕ್ತಿಗಳ ಸೆಣಸಾಟವಾಗಿ ಪರಿಣಮಿಸಿದೆ. ೨೦೦೯ರ ಚುನಾವಣೆಯು ಬಹುಶಃ ಅಧೋಗತಿಯ ಪಾತಾಳವನ್ನೇ ಕಂಡಿತು. ಚುನಾವಣಾ ಆಯೋಗವು ಕೂಡ, ಸಾರ್ವಜನಿಕ ಹಿಂಸೆ ಹಾಗೂ ಬೂತ್ ಮುತ್ತಿಗೆ ಇತ್ಯಾದಿಗಳನ್ನು ಸ್ವಲ್ಪಮಟ್ಟಿಗೆ ನಿಯಂತ್ರಿಸಲು ತನಗೆ ಸಾಧ್ಯವೇ ಹೊರತು, ಹಣದ ಬಲದಿಂದ ನಾಚಿಕೆಗೆಟ್ಟ ಮುಂದಾಳುಗಳು ಮತಗಳನ್ನು ಕೊಂಡುಕೊಳ್ಳುವುದನ್ನು ತಾನು ಯಾವ ರೀತಿಯಲ್ಲಿಯೂ ತಪ್ಪಿಸಲಾರೆನೆಂದು ಒಪ್ಪಿಕೊಳ್ಳಬೇಕಾಯಿತು.

ಸಾರ್ವಜನಿಕ ಹಣಕಾಸು ಇರುವುದು ಸರ್ಕಾರದ ಮೂಲಭೂತ ಜವಾಬ್ದಾರಿಗಳಾದ ಕಾನೂನು ಸುವ್ಯವಸ್ಥೆ, ಸಾರ್ವಜನಿಕ ಆರೋಗ್ಯ ಹಾಗೂ ಶಿಕ್ಷಣ, ಸಾರ್ವಜನಿಕ ಸೌಲಭ್ಯಗಳಾದ ರಸ್ತೆಗಳು, ವಿದ್ಯುತ್, ನೀರಿನ ಸರಬರಾಜು ಮುಂತಾದುವುಗಳನ್ನು ನಿರ್ವಹಿಸುವುದಕ್ಕಾಗಿ. ಈ ಹಣವನ್ನು ರಾಜಕೀಯ ಪಕ್ಷಗಳು ಅಗ್ಗವಾಗಿ ಆಹಾರ ಬಟ್ಟೆಗಳನ್ನು ನೀಡುವುದಕ್ಕೆ, ಟೆಲಿವಿಷನ್ ಸೆಟ್‌ಗಳನ್ನು, ಅನಿಲ ಸಂಪರ್ಕಗಳನ್ನು ನೀಡುವುದಕ್ಕೆ ಬಳಸಲು ಹೊರಟರೆ, ರಾಜ್ಯದ ಮೇಲುಸ್ತುವಾರಿಗೆ ಹಣವೆಲ್ಲಿ ದೊರಕುತ್ತದೆ? ಸರ್ಕಾರ ಹೀಗೆ ತನ್ನ ಮೂಲಭೂತ ಕರ್ತವ್ಯನಿರ್ವಹಣೆಯಲ್ಲಿಯೇ ವಿಫಲಗೊಂಡಿತೆಂದರೆ ದೇಶದ ರಕ್ಷಣೆಗೆ ಧಕ್ಕೆ ಬರುವುದು ಖಂಡಿತ.

ವಾಸ್ತವವಾಗಿ, ಇಂದು ನಮ್ಮ ದೇಶವು ಎರಡು ಕ್ಷೇತ್ರಗಳಲ್ಲಿ ಅಪಾಯವನ್ನೆದುರಿಸುತ್ತಿದೆ. ಮೊದಲನೆಯದು, ಉಗ್ರಗಾಮಿಗಳು ಚಟುವಟಿಕೆಯಿಂದಿರುವ ಜಮ್ಮು ಮತ್ತು ಕಾಶ್ಮೀರ ಹಾಗೂ

ಈಶಾನ್ಯ ರಾಜ್ಯಗಳ ಗಡಿ ಪ್ರದೇಶಗಳು. ಎರಡನೆಯದೆಂದರೆ ನಕ್ಸಲ್‌ವಾದಿಗಳು ಸರ್ಕಾರದ ಸ್ಥಾಪಿತ ಆಡಳಿತಯಂತ್ರದ ವಿರುದ್ಧ ನೇರವಾಗಿಯೆ ಬಂಡಾಯವೆದ್ದಿರುವ ದೇಶದ ಸುಮಾರು ಮೂರನೆಯ ಒಂದು ಭಾಗದಷ್ಟು ಜಿಲ್ಲೆಗಳು. ಅತಿಯಾದ ಭ್ರಷ್ಟಾಚಾರದಿಂದ ತನ್ನ ಪ್ರಸ್ತುತತೆಯನ್ನೇ ಕಳೆದುಕೊಂಡು ಸರ್ಕಾರವು ನಿರ್ವೀರ್ಯವಾಗಿರುವ ಇಂದಿನ ಸನ್ನಿವೇಶದಲ್ಲಿ ಈ ಹೋರಾಟಗಾರರೇ ಜನರಿಗೆ ಪ್ರಸ್ತುತವೆನ್ನಿಸಿದರೆ, ಅವರಲ್ಲಿ ಆಶೋತ್ತರಗಳನ್ನು ಮೂಡಿಸಿದರೆ, ಅಚ್ಚರಿಯೇನಿದೆ? ಸರ್ಕಾರದ ಹೃದಯಹೀನ ಕಾರ್ಯನಿರ್ವಹಣೆಯಲ್ಲಿ ಬಡಜನತೆಗೂ ಹರಿಜನ–ಗಿರಿಜನರಂತಹ ಹಿಂದುಳಿದವರಿಗೂ ಅಭಿವೃದ್ಧಿಪಥದಲ್ಲಿ ತಮ್ಮನ್ನು ಅವಗಣಿಸಲಾಗಿದೆ ಎನ್ನಿಸಿರುವುದರಿಂದಲೇ ನಕ್ಸಲೀಯರು ದಿನೇ ದಿನೇ ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ.

ಭಾರತದಲ್ಲಿನ ಇನ್ನೊಂದು ವಿಶೇಷವೆಂದರೆ, ರಾಜಕೀಯವು ಅಪರಾಧಿಗಳಿಂದ ಮತ್ತು ಪಾತಕಿಗಳಿಂದ ತುಂಬಿಹೋಗುತ್ತಿರುವುದು. ಕಳೆದ ಚುನಾವಣೆಗಳಲ್ಲಿ ಸಂಸತ್ತಿಗೆ ಆರಿಸಿ ಬಂದ ಸದಸ್ಯರಲ್ಲಿ ಶೇಕಡ ೨೫ ರಷ್ಟು ಜನರ ವಿರುದ್ಧ ಹಲವಾರು ಆರೋಪಗಳಿವೆಯೆಂದರೆ ಅನೇಕರಿಗೆ ಆಶ್ಚರ್ಯವಾಗಬಹುದು! ಭಾರತವು ಒಂದು ಪಾತಕಿಗಳ ದೇಶವಾಗಿ ಬೆಳೆಯುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ. ಏಕೆಂದರೆ ಭಾರತದ ನ್ಯಾಯಾಲಯಗಳಲ್ಲಿ ನಿಜವಾಗಿ ಶಿಕ್ಷೆಯಾಗುವುದು ಕೇವಲ ಶೇಕಡ ೬ ರಷ್ಟು ಅಪರಾಧಿಗಳಿಗೆ ಮಾತ್ರ. ಭಾರತದ ನ್ಯಾಯಾಂಗವು ಶಿಕ್ಷೆ ಜಾರಿಯಾಗುವ ಪ್ರಮಾಣದಲ್ಲಿ ಮಾತ್ರವಲ್ಲ, ನ್ಯಾಯತೀರ್ಮಾನ ಮಾಡುವ ಗುಣಮಟ್ಟದಲ್ಲಿಯೂ ತುಂಬಾ ಹಿಂದಿದೆ. ಭಾರತದ ನ್ಯಾಯಾಲಯಗಳಲ್ಲಿ ಇಂದು ತೀರ್ಮಾನವಾಗದೆ ಉಳಿದ ಸುಮಾರು ೩೦ ಮಿಲಿಯ ಪ್ರಕರಣಗಳಿವೆ! ಇಂದಿನಿಂದಲೇ ಇನ್ನು ಒಂದೇ ಒಂದು ಪ್ರಕರಣವನ್ನೂ ದಾಖಲು ಮಾಡಿಕೊಳ್ಳದಿದ್ದರೂ, ಈಗಿರುವ ಈ ಪ್ರಕರಣಗಳು ತೀರ್ಮಾನವಾಗಲು ಇನ್ನೂ ೩೦೦ ವರ್ಷಗಳು ಬೇಕಾಗಬಹುದು.

ಸರ್ಕಾರದಲ್ಲಿರುವ ಭ್ರಷ್ಟಾಚಾರದ ವಿರುದ್ಧ ಸಮರ ಹೂಡುವ ಮೊದಲು, ವ್ಯಾವಹಾರಿಕವಾದ ನಿವಾರಣೋಪಾಯವೊಂದನ್ನು ನಾವು ಕಂಡುಕೊಳ್ಳಬೇಕು. ಸರ್ಕಾರದಲ್ಲಿರುವವರೇ ಸರಕಾರಿ ಯಂತ್ರದ ಪ್ರಯೋಜನವನ್ನು ದುರುಪಯೋಗಪಡಿಸಿಕೊಳ್ಳುತ್ತಿರುವಾಗ, ರಾಜಕೀಯವು ಕಪ್ಪುಹಣದ ಬಲದ ಮೇಲೆಯೇ ನಿಂತಿರುವಾಗ, ಇದು ಹೇಗೆ ತಾನೇ ಸಾಧ್ಯ? ಭ್ರಷ್ಟಾಚಾರ ನಿರ್ಮೂಲನೆಯ ಹೊರತು ಅನ್ಯಮಾರ್ಗವಿಲ್ಲವೆನ್ನುವುದನ್ನು ನಮ್ಮ ಧುರೀಣರು ಮೊದಲು ಮನಗಾಣಬೇಕು. ಈ ವಿಷ ವರ್ತುಲದಲ್ಲಿರುವ ರಾಜಕಾರಣಿಗಳ, ಅಧಿಕಾರವರ್ಗದವರ ಹಾಗೂ ನ್ಯಾಯಾಲಯಗಳಲ್ಲಿನ ಭ್ರಷ್ಟಾಚಾರಗಳ ನಿರ್ಮೂಲನೆಗೆ ಪ್ರತ್ಯೇಕವಾದ ನಿವಾರಣೋಪಾಯಗಳನ್ನು ನಾವು ಕಂಡುಕೊಳ್ಳಬೇಕು. ದೇಶದಾದ್ಯಂತ ಇರುವ ೧,೨೦೦ ಸಾರ್ವಜನಿಕ ಸಮಾಜಸೇವಾ ಸಂಘಟನೆಗಳು ಒಗ್ಗೂಡಿ, ೨೦೦೯ರಲ್ಲಿ ನಡೆದ ೧೫ನೆಯ ಲೋಕಸಭಾ ಚುನಾವಣೆಯ ವಿಶ್ಲೇಷಣೆಯೊಂದನ್ನು ನಡೆಸಿದವು. ಇದರಿಂದ ಹೊರಹೊಮ್ಮಿದ ಕೆಲವು ಅಂಶಗಳೆಂದರೆ, (೧) ಹತ್ತು ಲಕ್ಷ ರೂಪಾಯಿ ಹಣವಿದ್ದವನಿಗಿಂತ ೫ ಕೋಟಿ ರೂಪಾಯಿ ಹಣವಿದ್ದವನು ಲೋಕಸಭಾ ಚುನಾವಣೆಯಲ್ಲಿ ಗೆಲ್ಲುವ ಸಂಭವ ಸುಮಾರು ೭೫ರಷ್ಟು ಹೆಚ್ಚು; (೨) ೬೪ ಕ್ಯಾಬಿನೆಟ್ ದರ್ಜೆಯ ಸಚಿವರುಗಳ ಪೈಕಿ ೨೩ ಜನರು ೫ ಕೋಟಿಗಿಂತಲೂ ಹೆಚ್ಚು ಆಸ್ತಿಯುಳ್ಳವರು; (೩) ಲೋಕಸಭೆಯ ೫೪೩ ಸದಸ್ಯರ ಒಟ್ಟು ಆಸ್ತಿಪಾಸ್ತಿಗಳ ಮೌಲ್ಯ ೨೮೦೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು!

ಈ ಭ್ರಷ್ಟಾಚಾರದ ವಿಷವರ್ತುಲದಿಂದ ಹೊರಕ್ಕೆ ಬರುವ ಮಾರ್ಗವಿದೆಯೆ? "ಚಲನೆಯ ತತ್ತ್ವ, ಸಮತೋಲನ ಹಾಗೂ ಪ್ರಹಾರ ಕೌಶಲಗಳಿಂದ ನಮಗಿಂತ ಹೆಚ್ಚು ಬಲಿಷ್ಠರಾದವರನ್ನೂ ಗೆಲ್ಲಬಹುದು" ಎಂಬ ಜಪಾನಿನ 'ಜುಡೋ' ಯುದ್ಧತಂತ್ರ ಇಲ್ಲಿ ನಮ್ಮ ನೆರವಿಗೆ ಬರಬಹುದು. ಮಹಾತ್ಮ ಗಾಂಧಿ ಅಪ್ರತಿಮ ರಾಜಕೀಯ 'ಜುಡೋ' ತಂತ್ರ ಪರಿಣತರಾಗಿದ್ದರು. ಮಹಾ ಸಾಮ್ರಾಜ್ಯಶಾಹಿ ಬ್ರಿಟಿಷ್ ಬಲವನ್ನು ಏಕಾಏಕಿ ಎದುರಿಸುವುದು ಸಾಧ್ಯವೇ ಇಲ್ಲವೆಂದು ಮನಗಂಡ ಅವರು, ಅಹಿಂಸಾತ್ಮಕ ಸತ್ಯಾಗ್ರಹವೆಂಬ ಬೇರೆಯೇ ತಂತ್ರವನ್ನು ಬಳಸಿ ಗೆದ್ದರು. 'ಜುಡೋ' ತಂತ್ರದ ವೈಶಿಷ್ಟ್ಯವೆಂದರೆ, ಶತ್ರುವಿನ ಬಲವೇ ಅವನ ದೌರ್ಬಲ್ಯವಾಗುವ ಹಾಗೆ ಮಾಡುವುದು. ಚುನಾವಣೆಗೆ ನಿಲ್ಲುವ ಉಮೇದುವಾರರ ಆರ್ಥಿಕ ಬಲವೇ ಅವರ ದೌರ್ಬಲ್ಯವಾಗುವಂತೆ ಮಾಡಲು ಸಾಧ್ಯವೇ? ಇದನ್ನು ಸಮಸ್ತ ರಾಜಕೀಯ ಪಕ್ಷಗಳೂ ಒಗ್ಗೂಡಿ ಯೋಚಿಸಬೇಕು. ಕೇಂದ್ರೀಯ ವಿಚಕ್ಷಣಾ ಕಮೀಷನರ್ ಆಗಿದ್ದ ನಾನು, ಅಪರಾಧಿಗಳೆನಿಸಿಕೊಂಡವರು ಆರೋಪದಿಂದ ಮುಕ್ತರಾಗುವವರೆಗೂ ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ಮಾಡಬೇಕೆಂಬ ಸಲಹೆಯನ್ನು ಪದೇ ಪದೇ ನೀಡಿದ್ದೇನೆ.

ತಮ್ಮ ವಿರುದ್ಧ ಬೇಕಾದಷ್ಟು ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿದ್ದರೂ, ಅಭ್ಯರ್ಥಿಗಳು ಪ್ರಸ್ತುತ ನ್ಯಾಯಾಂಗ ವ್ಯವಸ್ಥೆಯ ಆಮೆನಡಿಗೆಯ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ. ನ್ಯಾಯಾಲಯದಿಂದ ಅವರು ಅಪರಾಧಿಗಳೆಂದು ಘೋಷಣೆಯಾಗುವ ಮುನ್ನವೇ ಅವರು ಸಂಸತ್ತನ್ನು ಪ್ರವೇಶಿಸಿ ಅಧಿಕಾರದ ಪ್ರಯೋಜನಗಳೆಲ್ಲವನ್ನೂ ಪಡೆದುಕೊಂಡು ಆಗಿರುತ್ತದೆ. ಇದನ್ನು ತಪ್ಪಿಸಲು, ಯಾರ ಮೇಲೆ ದೂರುಗಳು ದಾಖಲಾಗಿರುತ್ತವೆಯೋ ಅವರು ಚುನಾವಣೆಗೆ ನಿಲ್ಲದಂತೆ ಮಾಡಬೇಕು. ಆಗ, ಅವರಿಗೆಷ್ಟು ಧನಬಲವಿದ್ದರೂ ಸಹ, ನ್ಯಾಯಾಂಗದ ಆಮೆನಡಿಗೆಯೇ ಅವರನ್ನು ಅಧಿಕಾರದಿಂದ ದೂರವಿರಿಸುತ್ತದೆ; ಕೈ ಕೈ ಹಿಸುಕಿಕೊಳ್ಳುವಂತೆ ಮಾಡುತ್ತದೆ.

ದೇಶದ ರಕ್ಷಣಾವ್ಯವಸ್ಥೆಗಾಗಿ ಶಸ್ತ್ರಾಸ್ತ್ರಗಳ ಕೊಳ್ಳುವಿಕೆಯಲ್ಲಿ ನಡೆಯುವ ಭ್ರಷ್ಟಾಚಾರವು ದೊಡ್ಡ ಪ್ರಮಾಣದ್ದು. ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರದ ಕುದುರುವಿಕೆಯಲ್ಲಿ ಅಡಕವಾಗಿರುವ ಲಂಚದ ಪ್ರಮಾಣವೂ ಭಾರೀ ದೊಡ್ಡ ಪ್ರಮಾಣದ್ದೇ. ರಕ್ಷಣಾ ಇಲಾಖೆಯ ಮುಂದಾಳುಗಳೇ ಲಂಚಕ್ಕೆ ಕೈಯೊಡ್ಡುವರೆಂದಾದರೆ ನಮ್ಮ ಸೈನಿಕರು ಎಷ್ಟು ಉತ್ಸಾಹದಿಂದ ಹೋರಾಡಬಹುದು? ಅವರ ನೈತಿಕ ಸ್ಥೈರ್ಯದ ಗತಿಯೇನು? ಇದು ದೇಶವನ್ನು ದುರ್ಬಲಗೊಳಿಸುವುದು ಖಂಡಿತ. ಎಲ್ಲ ರಾಷ್ಟ್ರಗಳನ್ನೂ ಕಾಡುತ್ತಿರುವ ದೊಡ್ಡ ಪಿಡುಗು ಇದು. ರಕ್ಷಣಾ ಇಲಾಖೆಯ